**ಸೋಮವಾರಪೇಟೆ ತಾಲ್ಲೂಕಿನಲ್ಲಿ ರೇಷ್ಮೆಇಲಾಖೆ ವತಿಯಿಂದ ಹರಿಜನಗಿರಿಜನರಿಗೆ ಸೌಲಭ್ಯ.**

5 - ಶ್ರೀ ಎ.ಎಂ. ಬೆಳ್ಳಿಯಪ್ಪ (ಸೋಮವಾರ ಪೇಟೆ) : ಮಾನ್ಯ ರೇಷ್ಮೆ ಕೃಷಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

*ಅ) ಸೋಮವಾರ ಪೇಟೆ ತಾಲ್ಲೂಕಿನಲ್ಲಿ ರೇಷ್ಮೆ ಇಲಾಖಾ ವತಿಯಿಂದ ಎಷ್ಟು ಜನ ಹರಿಜನ ಗಿರಿಜನರಿಗೆ ಸರ್ಕಾರದಿಂದ ಸಾಲ ಕಲ್ಪಿಸಲಾಗಿದೆ.*

*ಆ) ಸ್ಕೀಂಗಳ ವಿವರಗಳೇನು?*

*ಇ) ಒಟ್ಟು ಮಂಜೂರಾದ ಹಣವೆಷ್ಟು?*

ಡಾ॥ ಜಿ. ಪರಮೇಶ್ವರ (ರೇಷ್ಮೆ ರಾಜ್ಯ ಸಚಿವರು) :

ಅ) ಸರ್ಕಾರದಿಂದ ಸಾಲ ನೀಡುವ ಯೋಜನೆ ಸೋಮವಾರ ಪೇಟೆ ತಾಲ್ಲೂಕಿನಲ್ಲಿ ಇಲ್ಲ. ಆದರೆ ಬ್ಯಾಂಕುಗಳಿಂದ ಸಾಲ ಪಡೆದುಕೊಂಡಿರುವ ಹರಿಜನ ಮತ್ತು ಗಿರಿಜನರಿಗೆ ಈ ಕೆಳಗಿನಂತೆ ಇಲಾಖಾ ಮತಿಯಿಂದ ಸಹಾಯ ಧನ ನೀಡಲಾಗಿದೆ.

**ಅ) ಪರಿಶಿಷ್ಟ ಜಾತಿ ಫಲಾನುಭವಿಗಳಿಗಾಗಿ**

1. ರೇಷ್ಮೆಹುಳು ಸಾಕುವ ಮನೆ
2. ಹುಳುಸಾಕಣೆ ಉಪಕರಣಗಳು
3. ಹಿಪ್ಪುನೇರಳೆ ವ್ಯವಸಾಯಕ್ಕೆ ಪ್ರೋತ್ಸಾಹ
4. ಪ್ರೋಗ್ರಾಂ ಆಫ್ ಪ್ಯಾಕೇಜ್ ಬೆನಿಫಿಟ್

**ಪರಿಶಿಷ್ಟ ವರ್ಗ ಫಲಾನುಭವಿಗಳಿಗಾಗಿ**

1. ಹಿಪ್ಪುನೇರಳೆ ವ್ಯವಸಾಯಕ್ಕೆ ಪ್ರೋತ್ಸಾಹ ಧನ
2. ರೇಷ್ಮೆ ಹುಳುಸಾಕಣೆ ಸಲಕರಣೆಗಳ ಸರಬರಾಜು

ಇ) ಒಟ್ಟು ಸಹಾಯ ಧನ ರೂ. 1,68,000-00

**ಬೇಲೂರು ತಾಲ್ಲೂಕಿನಲ್ಲಿ ಪ್ರವಾಹ ಪರಿಹಾರ**

15 - ಶ್ರೀ ಬಿ.ಹೆಚ್. ಲಕ್ಷ್ಮಣಯ್ಯ (ಬೇಲೂರು) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

*ಅ) ಬೇಲೂರು ತಾಲ್ಲೂಕಿನಲ್ಲಿ 1993-94 ಹಾಗೂ 1994-95ರಲ್ಲಿ ಅತಿವೃಷ್ಟಿಯಿಂದಾಗಿ ಹಾನಿಗೊಳಗಾದ ಕೆರೆಗಳು, ರಸ್ತೆಗಳು (ಜಿಲ್ಲಾ ಪರಿಷತ್ ಮತ್ತು ಲೋಕೋಪಯೋಗಿ) ಮತ್ತು ಖಾಸಗಿ ಕಟ್ಟಡಗಳು, ಬೆಳೆಗಳ ಒಡ್ಡುಗಳು ಹಾಗೂ ಪಂಪುಸೆಟ್ಟುಗಳು ಎಷ್ಟು? ವಿವರ ಒದಗಿಸುವುದು.*

*ಆ) 1993-94 ಮತ್ತು 1994-95ರಲ್ಲಿ ಪರಿಹಾರ ಕಾರ್ಯಗಳಿಗಾಗಿ ಮಂಜೂರಾದ ಹಣವೆಷ್ಟು?*

*ಇ) 1993-94 ರಲ್ಲಿ ಹಾನಿಗೊಳಗಾದ ಕೆಲವು ಕಾಮಗಾರಿಗಳನ್ನು • ಜಿಲ್ಲಾ ಸಚಿವರು ಖುದ್ದಾಗಿ ಪರಿಶೀಲಿಸಿ, ಸದರಿ ಕಾಮಗಾರಿಯ ಬಗ್ಗೆ ಸೂಕ್ತ ಕ್ರಮ ಕೈಗೊಳ್ಳಬೇಕೆಂಬುದಾಗಿ ತಿಳಿಸಿದ್ದರು. ಇನ್ನೂ ಕೈಗೊಳ್ಳದಿರಲು ಕಾರಣವೇನು?*

• ಶ್ರೀ ಧರ್ಮಸಿಂಗ್ (ಕಂದಾಯ ಸಚಿವರು) :

ಅ) ವಿವರಗಳನ್ನು ಅನುಬಂಧದಲ್ಲಿ ನೀಡಿದೆ.

ಆ) 1) 1993-94ನೇ ಸಾಲಿನಲ್ಲಿ ಹಾಸನಜಿಲ್ಲೆಗೆ ರೂ.94.00ಲಕ್ಷಗಳನ್ನು ಬಿಡುಗಡೆಮಾಡಿದ್ದು, ಇದರಲ್ಲಿ ಬೇಲೂರು ತಾಲ್ಲೂಕಿಗೆ ರೂ.23,72,043.00 ಗಳನ್ನು ಬಿಡುಗಡೆ ಮಾಡಿದೆ.

2) 1994-95ನೇ ಸಾಲಿನಲ್ಲಿ ಹಾಸನಜಿಲ್ಲೆಗೆ ರೂ.60.00 ಲಕ್ಷಗಳನ್ನು ಬಿಡುಗಡೆ ಮಾಡಿದ್ದು, ಈ ಪೈಕಿ ರೂ.15.00 ಲಕ್ಷಗಳನ್ನು ಬೇಲೂರು ತಾಲ್ಲೂಕು ಖಾಸಗಿ ಆಸ್ತಿಪಾಸ್ತಿಗಳ ಪರಿಹಾರ ನೀಡಲು ಮತ್ತು ಸಾರ್ವಜನಿಕ ಆಸ್ತಿಪಾಸ್ತಿಗಳ ದುರಸ್ತಿ ಕೈಗೊಳ್ಳಲು ಬಿಡುಗಡೆ ಮಾಡಿದೆ.

ಇ) 1993-94ನೇಸಾಲಿನಲ್ಲಿ ಬೇಲೂರು ತಾಲ್ಲೂಸ್ನಲ್ಲಿ ಬಾರಿ ಮಳೆಯಿಂದ ಹಾನಿಗೊಂಡ ಸಾರ್ವಜನಿಕ ಆಸ್ತಿಪಾಸ್ತಿಗಳ ದುರಸ್ತಿಗಾಗಿ ರೂ.21.30 ಲಕ್ಷಗಳು ಖರ್ಚು ಮಾಡಿದೆ. ಪ್ರಕೃತಿವಿಕೋಪ ಪರಿಹಾರನಿಧಿಯಲ್ಲಿ ಲಭ್ಯವಿರುವ ಹಣದ ಆಧಾರದ ಮೇಲೆ ಇತರೆ ಕಾಮಗಾರಿಗಳನ್ನು ಕೈಗೊಳ್ಳಲಾಗುವುದು.

# ಅನುಬಂಧ

## 1993ನೇ ಅಕ್ಟೋಬರ್‌ನಲ್ಲಿ ಉಂಟಾದ ಅತಿವೃಷ್ಟಿಯಿಂದ ಬೇಲೂರು ತಾಲ್ಲೂಕಿನಲ್ಲಿ ಆಗಿರುವ ಹಾನಿಯ ವಿವರಗಳು.

(ರೂ. ಲಕ್ಷಗಳಲ್ಲಿ)

| ತಾಲ್ಲೂಕಿನ ಹೆಸರು | ಜಾನುವಾರು ಹಾನಿ | | ಕೃಷಿ ಬೆಳೆ ಹಾನಿ | | ಮನೆಗಳ ಹಾನಿ | | | | ನೀರಾವರಿ ಪಂಪು ಸೆಟ್ಟುಗಳು | | ಒಟ್ಟು ಖಾಸಗಿ ಆಸ್ತಿಗೆ ಆಗಿರುವ ಹಾನಿ |
|---|---|---|---|---|---|---|---|---|---|---|---|
| | ಸಂಖ್ಯೆ | ಹಾನಿ | ವಿಸ್ತೀರ್ಣ | ಹಾನಿ | ಪೂರ್ಣ ಕುಸಿದ ಮನೆಗಳು | | ಭಾಗಶ ಕುಸಿದ ಮನೆಗಳು | | ಸಂಖ್ಯೆ | ಹಾನಿ | |
| | | | | | ಸಂಖ್ಯೆ | ಹಾನಿ | ಸಂಖ್ಯೆ | ಹಾನಿ | | | |
| ಬೇಲೂರು | 5 | 00.05 | 275 | 7.52 | 69 | 1.50 | 97 | 1.82 | 6 | 00.15 | 11.04 |

## ಸಾರ್ವಜನಿಕ ಆಸ್ತಿಪಾಸ್ತಿಗಳಿಗಾಗಿರುವ ಹಾನಿ ವಿವರ

| ಕಟ್ಟಡಗಳು | | ಸೇತುವೆ ಮತ್ತು ಅಡಿಗಾಲುವೆಗಳು | | ಜಿಲ್ಲಾ ಪರಿಷತ್ತಿನ ರಸ್ತೆಗಳು | | ಲೋಕೋಪಯೋಗಿ ಇಲಾಖೆಯ ರಸ್ತೆಗಳು | | ಸಣ್ಣ ನೀರಾವರಿ ಕರೆಗಳು | | ಒಟ್ಟು ಸಾರ್ವಜನಿಕ ಆಸ್ತಿಗಾಗಿರುವ ಹಾನಿ |
|---|---|---|---|---|---|---|---|---|---|---|
| ಸಂಖ್ಯೆ | ಹಾನಿ | ಸಂಖ್ಯೆ | ಹಾನಿ | ಸಂಖ್ಯೆ | ಹಾನಿ | ಸಂಖ್ಯೆ | ಹಾನಿ | ಸಂಖ್ಯೆ | ಹಾನಿ | |
| – | – | 7 | 1.75 | 6 | 5.00 | 20 | 10.00 | 10 | 6.00 | 22.75 |

## 1994ನೇ ಜುಲೈ ತಿಂಗಳಲ್ಲಿ ಉಂಟಾದ ಅತೀವೃಷ್ಟಿಯಿಂದ ಬೇಲೂರು ತಾಲ್ಲೂಕಿನಲ್ಲಿ ಆಗಿರುವ ಹಾನಿಯ ವಿವರಗಳು

| ತಾಲ್ಲೂಕಿನ ಹೆಸರು | ಜಾನುವಾರು ಹಾನಿ | | ಕೃಷಿ ಬೆಳೆ ಹಾನಿ | | ಮನೆಗಳ ಹಾನಿ | | | | ನೀರಾವರಿ ಪಂಪು ಸೆಟ್ಟುಗಳು | | ನೀರಾವರಿ ಬಾವಿಗಳು | | ಒಟ್ಟು ಖಾಸಗಿ ಆಸ್ತಿಗಳಿಗೆ ಆಗಿರುವ ಹಾನಿ |
|---|---|---|---|---|---|---|---|---|---|---|---|---|---|
| | ಸಂಖ್ಯೆ | ಹಾನಿ | ವಿಸ್ತೀರ್ಣ | ಹಾನಿ | ಪೂರ್ಣ | ಕುಸಿತ | ಭಾಗಶಃ | ಕುಸಿತ | ಸಂಖ್ಯೆ | ಹಾನಿ | ಸಂಖ್ಯೆ | ಹಾನಿ | |
| | | | | | ಸಂಖ್ಯೆ | ಹಾನಿ | ಸಂಖ್ಯೆ | ï¿½ | | | | | |
| ಬೇಲೂರು | 4 | 0.15 | 1250 | 128.50 | 44 | 6.60 | 361 | 14.44 | 9 | 0.90 | 13 | 1.95 | 22.75 |

## ಸಾರ್ವಜನಿಕ ಆಸ್ತಿಪಾಸ್ತಿಗಳಿಗಾಗಿರುವ ಹಾನಿಯ ವಿವರ

| ಕಟ್ಟಡಗಳು | | | | ಸಣ್ಣ ನೀರಾವರಿ ಕೆರೆಗಳು | | | | ಒಟ್ಟು ಸಾರ್ವಜನಿಕ ಆಸ್ತಿಪಾಸ್ತಿಗಳಿಗಾಗಿರುವ ಹಾನಿ |
|---|---|---|---|---|---|---|---|---|
| ಜಿಲ್ಲಾ ಪರಿಷತ್ | | ಲೋಕೋಪಯೋಗಿ ಇಲಾಖೆ | | ಜಿಲ್ಲಾ ಪರಿಷತ್ | | ನೀರಾವರಿ ಇಲಾಖೆ | | |
| ಸಂಖ್ಯೆ | ಹಾನಿ | ಸಂಖ್ಯೆ | ಹಾನಿ | ಸಂಖ್ಯೆ | ಹಾನಿ | ಸಂಖ್ಯೆ | ಹಾನಿ | |
| 27 | 1.10 | 7 | 2.75 | 20 | 10.00 | 16 | 7.75 | 40.50 |